ಅ) ಜಮಖಂಡಿಯಿಂದ ಕಾಗವಾಡ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆ ಏರಿಸುವ ಯೋಜನೆ ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ, ಯಾವಾಗ ಮತ್ತು ಯಾವ ರೀತಿ ಅಭಿವೃದ್ಧಿ ಪಡಿಸಲಾಗುವುದು,

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಈಗಾಗಲೇ ಸರ್ಕಾರವು 2004–05 ರಲ್ಲಿ ಸರ್ಕಾರದ ಆದೇಶ ಸಂಖ್ಯೆ ಲೋಇ/15/ಮಾತಂಕೋ/2003 ಬೆಂಗಳೂರು ದಿನಾಂಕ 18–05–2004 ರಲ್ಲಿ ಕಾಗವಾಡ–ಕಲಾದಗಿ (ಶೇಡಬಾಳ, ಕುಡಚಿ, ತೇರದಾಳ, ಜಮಖಂಡಿ, ಕಾತರಕಿ ಮೂಲಕ) ರಾಜ್ಯ ಹೆದ್ದಾರಿ–53 ಎಂದು ಘೋಷಿಸಲಾಗಿದೆ

ಆ) ಕಾಮಗಾರಿಯು ಅವಶ್ಯಕತೆ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಅಭಿವೃದ್ಧಿ ಪಡಿಸಲಾಗುವುದು

1533 (2212) ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಹಳ್ಳಿಗಳಿಗೆ ಯಾವ ರೀತಿ ಮತ್ತು ಎಷ್ಟು ಗಂಟೆಗಳ ಕಾಲ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ,

ಆ) ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಪೂರೈಕೆಯಾಗದಿರಲು ಕಾರಣಗಳೇನು,

ಇ) ರಾತ್ರಿ ವೇಳೆ ಪದೇ ಪದೇ ವಿದ್ಯುತ್ ನಿಲ್ಲಿಸುತ್ತಿರುವುದರಿಂದ ಹಳ್ಳಿಗಳಲ್ಲಿ ದರೋಡೆ ಪ್ರಕರಣಗಳು ಹೆಚ್ಚುತ್ತಿದ್ದು ಮತ್ತು ರೈತರ ಬೆಳೆಗಳಿಗೂ ನೀರು ಹಾಯಿಸದೇ ತೊಂದರೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ರಾತ್ರಿ ವೇಳೆ ಪೂರ್ಣ ಪ್ರಮಾಣದಲ್ಲಿ ನಿರಂತರ ವಿದ್ಯುತ್ ಪೂರೈಸಲಾಗುವುದೇ, ಹಾಗಿಲ್ಲದಿದ್ದಲ್ಲಿ, ದಿನ ಬಿಟ್ಟು ದಿನವಾದರೂ ಗುಣಮಟ್ಟದ ಮತ್ತು ನಿರಂತರ ವಿದ್ಯುತ್ ಪೂರೈಸಲು ಇರುವ ತೊಂದರೆಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು).

ಅ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ದಿನವಹಿ ಸಾಮಾನ್ಯವಾಗಿ 9 ಗಂಟೆಗಳ ಅವಧಿಗೆ ಮೂರು ಫೇಸ್‌ನಲ್ಲಿ, 9 ಗಂಟೆಗಳ ಅವಧಿಗೆ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ 6 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಇರುವುದಿಲ್ಲ

ಆ) ನಿರಂತರ ವಿದ್ಯುತ್ ಪೂರೈಕೆಯಾಗದಿರಲು ಮುಖ್ಯ ಕಾರಣ ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಕೊರತೆ ರಾಜ್ಯದಲ್ಲಿ ಸರಾಸರಿ ಸುಮಾರು 5 ಲಕ್ಷಗಳಷ್ಟು ಹೊಸ ಗ್ರಾಹಕರು ಪ್ರತೀ ವರ್ಷ ವಿದ್ಯುತ್ ವ್ಯವಸ್ಥೆಗೆ ಸೇರ್ಪಡೆಗೊಳ್ಳುತ್ತಿದ್ದಾರೆ ಆದುದರಿಂದ ರಾಜ್ಯದ ವಿದ್ಯುತ್ ಬೇಡಿಕೆ ಪ್ರತೀ ವರ್ಷ ಹೆಚ್ಚುತ್ತಿದೆ ಆದರೆ, ಅಷ್ಟೇ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚುತ್ತಿಲ್ಲ ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳು ರಾಜ್ಯದ ವಿದ್ಯುತ್ ವ್ಯವಸ್ಥೆಗೆ ಬೇಡಿಕೆಗೆ ಅನುಗುಣವಾಗಿ ಸೇರ್ಪಡೆಗೊಳ್ಳುತ್ತಿಲ್ಲ ವಿದ್ಯುತ್ ಬೇಡಿಕೆಯನ್ನು ಲಭ್ಯತೆಯೊಂದಿಗೆ ಆದ್ದರಿಂದ ವಿದ್ಯುತ್ ಲಭ್ಯತೆಯ ಆಧಾರದ ಮೇಲೆ ಬೇಡಿಕೆಯನ್ನು ಸರಿದೂಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಕರ್ನಾಟಕವೂ ಸಹ ದಕ್ಷಿಣ ರಾಜ್ಯಗಳ ವಿದ್ಯುತ್ ವ್ಯವಸ್ಥೆಯ ಒಂದು ಭಾಗವಾಗಿರುವುದರಿಂದ ಕೇಂದ್ರ ವಿದ್ಯುತ್ ಪ್ರಾಧಿಕಾರ ಮತ್ತು ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗಗಳು ನೀಡಿರುವ ನಿರ್ದೇಶನಗಳ ಪ್ರಕಾರ ಗ್ರಿಡ್ ಫ್ರೀಕ್ವೆನ್ಸಿ ನಿಗದಿತ ಮಟ್ಟಕ್ಕಿಂತ ಕೆಳಗಿಳಿಯದಂತೆ ಎಚ್ಚರವಹಿಸಿ ಗ್ರಿಡ್ ಶಿಸ್ತನ್ನು ಕಾಪಾಡುವುದು ಬಹಳ ಅಗತ್ಯವಗಿರುತ್ತದೆ ಇಲ್ಲದಿದ್ದಲ್ಲಿ ಇಡೀ ದಕ್ಷಿಣ ರಾಜ್ಯಗಳ ವಿದ್ಯುತ್ ವ್ಯವಸ್ಥೆಯೇ ಸಂಪೂರ್ಣವಾಗಿ ಕುಸಿಯುವ ಸಂಭವವನ್ನು ತಳ್ಳಿಹಾಕುವಂತಿಲ್ಲ ಒಂದು ವೇಳೆ ವಿದ್ಯುತ್ ವ್ಯವಸ್ಥೆ ಸಂಪೂರ್ಣ ಕುಸಿದಲ್ಲಿ ಕರ್ನಾಟಕವೂ ಸೇರಿದಂತೆ ದಕ್ಷಿಣ ರಾಜ್ಯಗಳು ಅಂಧಕಾರದಲ್ಲಿ ಮುಳುಗುತ್ತವೆ ವಿದ್ಯುತ್ ವ್ಯವಸ್ಥೆಯ ಫ್ರೀಕ್ವೆನ್ಸಿ ನಿಗದಿತ ಮಟ್ಟದಲ್ಲಿ ಇರುವಂತೆ ನೋಡಿಕೊಳ್ಳಲು ಕೆಲವೊಮ್ಮೆ ವಿದ್ಯುತ್ ಬಳಕೆಯನ್ನು ನಿಯಂತ್ರಿಸಬೇಕಾಗುತ್ತದೆ

ಇ ಮತ್ತು ಈ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ರಾತ್ರಿ ವೇಳೆಯಲ್ಲಿ ಸಿಂಗಲ್ ಫೇಸ್ ಅಥವಾ ಮೂರು ಫೇಸ್‌ಗಳಲ್ಲಿ ವಿದ್ಯುತ್‌ನ್ನು ಒದಗಿಸಲಾಗುತ್ತಿದೆ ಬೇಸಿಗೆ ಕಾಲ ಮತ್ತು ಬರಗಾಲ ಪರಿಸ್ಥಿತಿಯಿಂದಲೂ ವಿದ್ಯುತ್ ಬೇಡಿಕೆ ರಾಜ್ಯದಲ್ಲಿ ದಿನೇ ದಿನೇ ಹೆಚ್ಚುತ್ತಿದೆ ಆದ್ದರಿಂದ ವಿದ್ಯುತ್ ಲಭ್ಯತೆಯ ಆಧಾರದ ಮೇಲೆ ಬೇಡಿಕೆಯನ್ನು ಸರಿದೂಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ವಿದ್ಯುತ್‌ನ ಗುಣಮಟ್ಟವನ್ನು ಸುಧಾರಿಸಲು ಹಾಗೂ ಓವರ್ ಲೋಡ್ ಸಮಸ್ಯೆಯನ್ನು ನಿವಾರಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ನಿಯಮಿತ 491 ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಾಣ ಮಾಡುವ ಮಹತ್ವಾಕಾಂಕ್ಷೆ ಯೋಜನೆಯನ್ನು ಹೊಂದಿದ್ದು, ಇವುಗಳನ್ನು ಹಂತ ಹಂತವಾಗಿ ಕಾರ್ಯಾರಂಭಗೊಳಿಸುವ ಗುರಿಯನ್ನು ಹೊಂದಲಾಗಿದೆ

1534 (2213) ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ನಗರದಲ್ಲಿರುವ ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಇದಕ್ಕಾಗಿ ಖರ್ಚಾದ ಹಣವೆಷ್ಟು, ಯಾವಾಗ ಖರ್ಚು ಮಾಡಲಾಯಿತು, ಮತ್ತು ಯಾವ ಮೂಲದಿಂದ ಹಣ ಖರ್ಚಾಗಿದೆ,

ಇ) ಈ ವರ್ಷವಾದರೂ ಸದರಿ ಕ್ರೀಡಾಂಗಣವನ್ನು ಪೂರ್ತಿ ಮಾಡಲು ಅನುದಾನ ಪೂರೈಸಲಾಗುವುದೇ?

ಶ್ರೀ ಹನುಮಂತಪ್ಪ ವೈ, ಆಲ್ಕೋಡ್(ಯುವಜನಸೇವಾ ಹಾಗೂ ಕ್ರೀಡಾ ಸಚಿವರು)

ಅ) ಬಂದಿದೆ